(9)

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾರರಹಿತ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಆಕುಕ/47/ಪಿಟಿಡಿ/2020, ದಿನಾಂಕ:19.09.2020.
2. ಆಯುಕ್ತರು, ಆಯುಷ್ ಇವರ ಪತ್ರ ಸಂಖ್ಯೆ: ಆಯುಷ್/52/ವೈಶಿ(2)/2021-22, ದಿನಾಂಕ:21.10.2021.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ:25.10.2021ರ ಸಭೆಯ ನಡವಳಿ.

15/11/21

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ 2020-21ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2)ರ ಪ್ರಸ್ತಾವನೆಯಲ್ಲಿ ಆಯುಕ್ತರು, ಆಯುಷ್ ಇಲಾಖೆ ಇವರು 2021-22ನೇ ಶೈಕ್ಷಣಿಕ ಸಾಲಿಗೆ ಶುಲ್ಕ ನಿಗದಿ ಮಾಡುವ ಕುರಿತು ಕೋವಿಡ್-19ರ ಹಿನ್ನೆಲೆಯಲ್ಲಿ ಬಹಳಷ್ಟು ಜನರು ಆರ್ಥಿಕ ಸಂಕಷ್ಟದಲ್ಲಿರುವ ಕಾರಣ ಶುಲ್ಕ ಹೆಚ್ಚಿಸಿದಲ್ಲಿ, ಅನೇಕ ಬಡ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಶುಲ್ಕ ಪಾವತಿಸಲು ಕಷ್ಟವಾಗಬಹುದು. ಆದ್ದರಿಂದ ಕಳೆದ ವರ್ಷದ ಶುಲ್ಕ ಮತ್ತು ಸೀಟು ಹಂಚಿಕೆಯನ್ನು ಯಥಾವತ್ತಾಗಿ ಮುಂದುವರೆಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3)ರ ನಡವಳಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಫೆಡರೇಷನ್ ಹಾಗೂ ವಿವಿಧ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಪ್ರಾಚಾರ್ಯರು ಮತ್ತು ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ 2021-22ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ,ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು 2020-21ನೇ ಸಾಲಿನಲ್ಲಿ ನಿಗದಿಪಡಿಸಿರುವುದನ್ನು ಯಥಾವತ್ತಾಗಿ ಮುಂದುವರೆಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ,

**ಆಕುಕ 267 ಪಿಐಎಂ 2021, ದಿನಾಂಕ: 10 /11/2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2021-22ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ,ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

.....2

## ಪದವಿ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ

### ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ

### ಬಿ.ಎ.ಎಂ.ಎಸ್., ಬಿ.ಯು.ಎಂ.ಎಸ್. ಬಿ.ಹೆಚ್.ಎಂ.ಎಸ್ ಕೋರ್ಸ್‌ಗಳಿಗೆ

| ಕ್ರ.ಸಂ | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.25,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.85 | ರೂ.25,000/- |

### ಬಿ.ಎನ್.ವೈ.ಎಸ್ ಕೋರ್ಸ್‌ಗಳಿಗೆ

| ಸೀಟು ಹಂಚಿಕೆ ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|
| ಸರ್ಕಾರಿ ಸೀಟುಗಳು 100% | ರೂ.25,000/- |

### ಆ) ಖಾಸಗಿ ಅನುದಾನಿತ ಆಯುರ್ವೇದ ಮಹಾವಿದ್ಯಾಲಯಗಳಲ್ಲಿ

| ಕ್ರ.ಸಂ | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.45,000/- |
| 2 | ರಾಜ್ಯ ಸರ್ಕಾರದ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು | ಶೇ.65 | ರೂ.45,000/- |
| 3 | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.20 | ರೂ.1,83,750/- |

### ಇ) ಖಾಸಗಿ ಅನುದಾನಿತರಹಿತ ಮಹಾವಿದ್ಯಾಲಯಗಳಲ್ಲಿ

### ಬಿ.ಎ.ಎಂ.ಎಸ್., ಬಿ.ಯು.ಎಂ.ಎಸ್. ಮತ್ತು ಬಿ.ಹೆಚ್.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.2,00,000/- |
| 2 | ರಾಜ್ಯ ಸರ್ಕಾರದ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು | ಶೇ.25 | ರೂ.60,000/- |
| 3 | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.40 | ರೂ.2,20,500/ |
| 4 | NRI/ಆಡಳಿತ ಮಂಡಳಿಯ ಸೀಟುಗಳು | ಶೇ.20 | ರೂ.7,00,000/- |

## ಬಿ.ಎನ್.ವೈ.ಎಸ್ ಕೋರ್ಸ್‌ಗಳಿಗೆ

| ಕ್ರ.ಸಂ | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.20 | ರೂ.60,000/- |
| 2 | ಕೆ.ಇ.ಎ ಭರ್ತಿ ಮಾಡುವ ಆಡಳಿತ ಮಂಡಳಿ ಸೀಟುಗಳು | ಶೇ.20 | ರೂ.1,83,750/- |
| 3 | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.40 | ರೂ.2,20,500/- |
| 4 | NRI/ಆಡಳಿತ ಮಂಡಳಿಯ ಸೀಟುಗಳು | ಶೇ.20 | ರೂ.7,00,000/- |

## ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ

### ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ

| ಕ್ರ.ಸಂ | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.50,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.85 | ರೂ.50,000/- |

### ಆ) ಖಾಸಗಿ ಅನುದಾನರಹಿತ ಮಹಾವಿದ್ಯಾಲಯಗಳಲ್ಲಿ

| ಕ್ರ.ಸಂ | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.3,67,500/- |
| 2 | ರಾಜ್ಯ ಸರ್ಕಾರದ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು | ಶೇ.25 | ರೂ.1,00,000/- |
| 3 | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.40 | ರೂ.3,67,500/- |
| 4 | NRI/ಆಡಳಿತ ಮಂಡಳಿಯ ಸೀಟುಗಳು | ಶೇ.20 | ರೂ.14,00,000/- |

## ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕೋರ್ಸ್‌ಗಳಿಗೆ

| ಕ್ರ.ಸಂ | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.1,00,000/- |
| 2 | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.55 | ರೂ.3,67,500/- |
| 3 | NRI/ಆಡಳಿತ ಮಂಡಳಿಯ ಸೀಟುಗಳು | ಶೇ.20 | ರೂ.14,00,000/- |

....4

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗದಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

ಭಾರತ ಸರ್ಕಾರದ ಕೋಟಾ ಸೀಟುಗಳಲ್ಲಿ ಭರ್ತಿಯಾಗದೆ ಉಳಿಯುವ ಸೀಟುಗಳನ್ನು ಅದೇ ಶುಲ್ಕದಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಿಯಮಾನುಸಾರ ಸೀಟು ಹಂಚಿಕೆ ಮಾಡ ತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

10/11/2021

**(ಶೈಲಾ ಆರ್.ಗೊರವರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ/ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
4. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು-560 009.

ಸಂಖ್ಯೆ: ಆಯುಷ್/52/ವೈಶಿ(2)/2021-22.

ಆಯುಷ್ ನಿರ್ದೇಶನಾಲಯ,
ಧನ್ವಂತರಿ ರಸ್ತೆ,
ಬೆಂಗಳೂರು. ದಿನಾಂಕ: 07-12-2021.

ಸರ್ಕಾರದ ಆದೇಶ ಸಂಖ್ಯೆ: ಆಕುಕ 267 ಪಿಐಎಂ 2021/ಇ.ಆ ಬೆಂಗಳೂರು, ದಿನಾಂಕ: 10-11-2021ರನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.

1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560001.
2. ರಿಜಿಸ್ಟ್ರಾರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು – 41.
3. ಪ್ರಾಚಾರ್ಯರುಗಳು, ರಾಜ್ಯದ ಎಲ್ಲಾ ಸರ್ಕಾರಿ ಆಯುರ್ವೇದ, ಯುನಾನಿ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮತ್ತು ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳು, ಕರ್ನಾಟಕ,
4. ಪ್ರಾಚಾರ್ಯರುಗಳು / ಆಡಳಿತ ಮಂಡಳಿಯವರು ರಾಜ್ಯದ ಎಲ್ಲಾ ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳು.

ಜಂಟಿ ನಿರ್ದೇಶಕರು (ಆಯುಷ್)
(ವೈದ್ಯಕೀಯ ಶಿಕ್ಷಣ)
ಆಯುಷ್ ನಿರ್ದೇಶನಾಲಯ
ಧನ್ವಂತರಿ ರಸ್ತೆ, ಬೆಂಗಳೂರು-09